**ದಿನಾಂಕ 02-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲು: ಪ್ರತಿವಾದಿ ಪರ ವಕೀಲರಿಂದ:-**

1. ನಾನು & ವಾದಿ ಒಂದೇ ಊರಿನವರು & ಅವರ ಪರಿಚಯ ಇದೆ. ಸರ್ವೆ ನಂ.107 ರಲ್ಲಿ 1 ಎಕರೆ ಆಸ್ತಿ ವಾದಿಗೆ ಇದೆ. ಸದರಿ ದಾವೆಯನ್ನು ಹನುಮಂತ ರವರು ಈ ಕೇಸನ್ನು ಹನುಮಂತಿ ಗಂಡ ಗೋವಿಂದಪ್ಪರವರ ಮೇಲೆ ಹಾಕಿರುತ್ತಾರೆ. ದಾವಾ ಆಸ್ತಿಯನ್ನು ಹನುಮಂತಿ ರವರು ಹನುಮಂತ ರವರಿಗೆ ಮಾರಾಟ ಮಾಡಲು ಜಿಪಿಎ ಯನ್ನು ಜಹಂಗೀರ್ ಪಾಷಾ ತಂದೆ ಗುಲಾಮ್ ಅಹಮದ್ ಖಾಜಿ ರವರಿಗೆ ಕೊಟ್ಟಿದ್ದರು.

2. ಡಿಸೆಂಬರ್ 22-2001 ರಲ್ಲಿ ನೊಂದಣಿ ಕಛೇರಿಯಲ್ಲಿ ಪತ್ರ ಆಗಿತ್ತು. ಸದರಿ ಮಾರಾಟದ ಮಾತುಕತೆ ಡಿಸೆಂಬರ್ 22 ಕ್ಕಿಂತ 15 ದಿನಗಳ ಮುಂಚೆ ವಾದಿಯ ಮನೆಯಲ್ಲಿ ಆಗಿತ್ತು. ರೂ.3,68,000/- ಕ್ಕೆ ಮಾತುಕತೆ ಆಗಿತ್ತು, ರೂ.3,63,000/- ಕೊಟ್ಟಿದ್ದರು, ರೂ.5,000/- ಹಣ ಕೊಡುವುದು ಬಾಕಿ ಇತ್ತು. ಹಣವನ್ನು ಜಹಂಗೀರ್ ಪಾಷಾ ರವರು ಪಡೆದಿದ್ದರು, ಹಣವನ್ನು ಹನುಮಂತ ರವರು ಕೊಟ್ಟಿದ್ದರು.

3. ಜಿಪಿಎ ಪತ್ರದಲ್ಲಿ ನಾನು ಸಾಕ್ಷಿದಾರನಿಲ್ಲ. ಜಿಪಿಎ ಯನ್ನು ನಾನು ನೋಡಿಲ್ಲ. ಖಾಜಿ ಜಹಂಗೀರ್ ರವರು ದಾವಾ ಆಸ್ತಿಯ ಮಾಲೀಕರಲ್ಲದೇ ಇರುವುದರಿಂದ, ಅವರಿಗೆ ನಿಪಿ-1 ನ್ನು ಮಾಡಿಕೊಡಲು ಬರುವುದಿಲ್ಲ ಎಂದರೆ ಸರಿಯಲ್ಲ. ಖರೀದಿ ಕರಾರು ಪತ್ರದ ರದ್ಧತಿ ಎಂದು ಹೇಳಿ ಜಹಂಗೀರ್ ಪಾಷಾ ರವರು ನಿಪಿ-1 ಕ್ಕೆ ಸಹಿಮಾಡಿಸಿಕೊಂಡಿದ್ದರು ಎಂದರೆ ಸರಿಯಲ್ಲ. ಜಿಪಿಎ ಯನ್ನು ಬರೆದುಕೊಡುವುದಾದರೆ ತಮ್ಮ ಸಂಬಂಧಿಕರಲ್ಲೇ ಬರೆದುಕೊಡುತ್ತಿದ್ದರು ಎಂದರೆ ಸಾಕ್ಷಿಯು ನಮ್ಮ ಸಮಕ್ಷಮ ನಿಪಿ-1 ಆಗಿತ್ತು ಎನ್ನುತ್ತಾರೆ.

4. ಜಿಪಿಎ ಗೆ ಕಾನೂನಿನ ಅಡಿಯಲ್ಲಿ ಯಾವುದೇ ಬೆಲೆ ಇಲ್ಲ, ಆದ್ದರಿಂದ ನಿಪಿ-1 ಕ್ಕೂ ಸಹ ಕಾನೂನು ರೀತಿಯ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಮಾಲೀಕರು ಹನುಮಂತಿ ರವರು ಇದ್ದಿದ್ದರಿಂದ ಅವರಿಗೆ ಮಾತ್ರ ಸಂಪೂರ್ಣ ಹಕ್ಕು ಇರುವುದು ಎಂದರೆ ಸಾಕ್ಷಿಯು ನಾವೆಲ್ಲರೂ ಮಾತುಕತೆಗೆಂದು ಇದ್ದಾಗ ಆಕೆ ಬಂದು ನಮ್ಮ ಮನೆಯ ಪರಿಸ್ಥಿತಿ ಚೆನ್ನಾಗಿಲ್ಲ, ಬರಲು ಆಗುವುದಿಲ್ಲ ಎಂದು ಹೇಳಿ ಜಿಪಿಎ ಯನ್ನು ಖಾಜಿ ಜಹಂಗೀರ್ ರವರಿಗೆ ನಿಪಿ-1 ನ್ನು ಮಾಡಿಕೊಟ್ಟಿದ್ದರು ಎನ್ನುತ್ತಾರೆ.

5. ನಿಮಗೆ ಈ ದಾವೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲ, ಖರೀದಿ ಕರಾರು ಆಗುವ ವೇಳೆಗೆ ನೀವು ಇರಲಿಲ್ಲ ಎಂದರೆ ಸರಿಯಲ್ಲ. ಈ ದಿನ ಸುಳ್ಳು ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ:-**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಸಿಂಧನೂರು.**